NOVEMBER 2023
ವಿತ್ತ ಸಂಚಿಕೆ


# INSPIRE INDIA

## ಸಲಹೆ ನಮ್ಮದು ಹೂಡಿಕೆ ನಿಮ್ಮದು




ಶರಣ್ ಪಾಟೀಲ್
ಆರ್ಥಿಕ ತಜ್ಞ

**INSPIRE INDIA WEALTH PRIVATE LTD.** @ 65, 'Surasa Enclave' 1st floor, Puttanna Road, Gandhi Bazar Basvanagudi, Bengaluru 560004, Ph: +91 8042129917, 9035414414. **Mail:** info@inspireindiafs.com **Website:** www.inspireindiafs.com




ನಾನು ನನ್ನ ಜಯದ ಹಾದಿಯಲ್ಲಿ ಸಾವಿರಾರು ಸೋಲುಗಳನ್ನು ಕಂಡಿದ್ದೇನೆ.

–ಥಾಮಸ್ ಆಲ್ವಾ ಎಡಿಷನ್



ಜೀವನದಲ್ಲಿ ಸಂತೋಷದಿಂದ ಇರಬೇಕಾದರೆ ಗುರಿಯ ಕಡೆಗೆ ಗಮನವಿಡಿ, ಜನ ಮತ್ತು ವಸ್ತುವಿನ ಕಡೆಗೆ ಅಲ್ಲ.

–ಆಲ್ಬರ್ಟ್ ಐನ್‌ಸ್ಟಿನ್



ಜಗತ್ತು ನೀನು ಕೊಟ್ಟ ಮಾದರಿಯಿಂದ ಬದಲಾಗಿದೆ. ನಿನ್ನ ಅಭಿಪ್ರಾಯದಿಂದ ಅಲ್ಲ.

–ಪೌಲ್ ಕೊಹೆಲೊ



# ಹೂಡಿಕೆ ಮಾಡಿ ಆದರೆ ಈ ತಪ್ಪುಗಳನ್ನು ನೆನೆಪಿಡಿ

ಈಕ್ವಿಟಿ ಮಾರುಕಟ್ಟೆಯಲ್ಲಿ ನೀವು ಅನುಭವಿ ಭಾರತೀಯ ಹೂಡಿಕೆದಾರನಾಗಿದ್ದರೆ ಹೂಡಿಕೆ ಎನ್ನುವುದು ಸುದೀರ್ಘಾವಧಿಯ ಕಸರತ್ತು ಎಂಬುದು ನಿಮಗೆ ಗೊತ್ತಿರುತ್ತದೆ. ಅದು ಶಿಸ್ತು, ತಾಳ್ಮೆಯನ್ನು ಬೇಡುತ್ತದೆ ಮತ್ತು ಅದರಲ್ಲಿ ಯಶಸ್ವಿಯಾಗಲು ಬೇಕಾದ ಅಪಾಯಗಳನ್ನು ಅರ್ಥ ಮಾಡಿಕೊಳ್ಳುವುದು ಕೂಡ ಸೇರಿದೆ. ಆದರೂ ಅನೇಕ ಮಂದಿ ಹೂಡಿಕೆದಾರರು ನಿರಂತರವಾಗಿ ತಪ್ಪುಗಳನ್ನು ಮಾಡುತ್ತಲೇ ಇರುತ್ತಾರೆ. ಹೊಸ ಹೂಡಿಕೆದಾರರು ಸಾಮಾನ್ಯವಾಗಿ ಹೆಚ್ಚು ಹೆಚ್ಚು ತಪ್ಪು ಮಾಡುತ್ತಾರೆ. ಯಾಕೆಂದರೆ ಅವರಿಗೆ ಮಾರುಕಟ್ಟೆಯ ರಿಸ್ಕ್ ಬಗ್ಗೆ ಪೂರ್ತಿ ಅರಿವು ಇರುವುದಿಲ್ಲ. ಈ ಲೇಖನದಲ್ಲಿ ಹೊಸ ಹೂಡಿಕೆದಾರರು ಮಾಡುವ ಎಂಟು ಸಾಮಾನ್ಯ ತಪ್ಪುಗಳು ಮತ್ತು ಅವುಗಳನ್ನು ತಪ್ಪಿಸುವುದು ಹೇಗೆ ಎಂಬುದರ ಬಗ್ಗೆ ಚರ್ಚೆ ಮಾಡೋಣ.

**1. ತಪ್ಪು ನಿರೀಕ್ಷೆಗಳು:** ಹೊಸ ಹೂಡಿಕೆದಾರರು ಮಾಡುವ ಬಹುದೊಡ್ಡ ತಪ್ಪು ಇದಾಗಿದೆ. ಷೇರು ಮಾರುಕಟ್ಟೆಯಲ್ಲಿ ಗೂಳಿ ಓಟ ಅಥವಾ ಕರಡಿಯ ರಂಪಾಟ ನಡೆದಿದ್ದಾಗ ಹೊಸ ಹೂಡಿಕೆದಾರರು ಮಾರುಕಟ್ಟೆ ಪ್ರವೇಶ ಮಾಡುತ್ತಾರೆ. ಷೇರುಪೇಟೆಯಲ್ಲಿ ಫಟಾಫಟ್ ಭಾರಿ ಗಳಿಕೆ ಮಾಡಬಹುದು, ಬಹುಬೇಗ ಶ್ರೀಮಂತರಾಗಬಹುದು ಎಂಬ ನಿರೀಕ್ಷೆ ಅವರದ್ದಾಗಿರುತ್ತದೆ. ಆದರೆ ವಾಸ್ತವವೆಂದರೆ ಹೂಡಿಕೆ ಸುಲಭಕ್ಕೆ ದಕ್ಕುವಂತಹುದಲ್ಲ. ಇದು ಸುದೀರ್ಘವಾದ ಆಟ. ಇಲ್ಲಿ ದಾರಿಯುದ್ದಕ್ಕೂ ಏರಿಳಿತಗಳು ಸಾಮಾನ್ಯ. ಇಲ್ಲಿ ಸೂಕ್ತ ಮತ್ತು ವಾಸ್ತವಿಕ ನಿರೀಕ್ಷೆಗಳನ್ನು ನಿಗದಿ ಮಾಡುವುದು ಅತ್ಯಂತ ನಿರ್ಣಾಯಕ. ಅದರಲ್ಲೂ ನೀವು ಹೊಸದಾಗಿ ಮಾರುಕಟ್ಟೆ ಪ್ರವೇಶ ಮಾಡಿದಾಗ ಹಾಗೂ ಬಹುದೊಡ್ಡ ಲಾಭದ ನಿರೀಕ್ಷೆ ಹೊಂದಿದ್ದಾಗ ಇದು ಅನಿವಾರ್ಯ. ಈ ಮಾರ್ಗ ಯಾವತ್ತೂ ಸೀದಾಸಾದಾ ಅಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮಾರುಕಟ್ಟೆ ಏರಿಳಿತಕ್ಕೆ ಒಳಗಾಗಬಹುದು ಹಾಗೂ ಕಾಲಕಾಲಕ್ಕೆ ನಷ್ಟಗಳನ್ನು ಅನುಭವಿಸಬಹುದು ಎಂಬುದರ ಅರಿವು ನಮಗಿರಬೇಕಾಗುತ್ತದೆ.

ಒಳ ಪು/ನೋಟ

ಖಾಸಗಿ ಹಣಕಾಸಿನ ನಿರ್ವಹಣೆ ಮಾರ್ಗಗಳು 3



4 ರಿಸ್ಕ್ ರಕ್ಷಣೆಗೆ ಬೇಕು ವಿಮೆ 5



**2. ಸುದೀರ್ಘಾವಧಿ ಹೂಡಿಕೆ ಯೋಜನೆ ಇಲ್ಲದಿದ್ದಾಗ:** ಈ ಹಿಂದೆಯೇ ಹೇಳಿದ ಹಾಗೆ ಹೂಡಿಕೆ ಎನ್ನುವುದು ಸುದೀರ್ಘವಾಗಿ ನಡೆಸುವ ಆಟ. ವಿಶೇಷವಾಗಿ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವ ಸಂದರ್ಭದಲ್ಲಿ ಸುದೀರ್ಘ ಅವಧಿಯ ಯೋಚನೆ ಅತ್ಯಗತ್ಯ. ಇದರ ಅರ್ಥ ಏನೆಂದರೆ ಐದು ಅಥವಾ ಏಳು ವರ್ಷ ಅಥವಾ ಅದಕ್ಕೂ ಹೆಚ್ಚಿನ ಅವಧಿಯ ಹೂಡಿಕೆಗಳನ್ನು ಹೊಂದಲು ನೀವು ಸಿದ್ಧರಿರಬೇಕು. ಈ ರೀತಿ ನಮ್ಮ ಹೂಡಿಕೆ ವ್ಯಾಪ್ತಿಯನ್ನ ವಿಸ್ತರಿಸಿಕೊಂಡಾಗ, ಹೂಡಿಕೆಯ ಮೂಲಭೂತ ಸಿದ್ಧಾಂತಗಳಿಗೆ ಹೆಚ್ಚಿನ ಗಮನ ನೀಡಿದಾಗ ಧನಾತ್ಮಕವಾದ ಆದಾಯ ನಿರೀಕ್ಷೆ ಮಾಡಬಹುದು ಹಾಗೂ ನಷ್ಟ ತಗ್ಗಲು ಸಾಧ್ಯವಾಗುತ್ತದೆ. ಇಂತಹ ಸಂದರ್ಭದಲ್ಲಿ ನಾವು ಮಾರುಕಟ್ಟೆಯಲ್ಲಿ ಉಂಟಾಗುವ ಅಲ್ಪಾವಧಿಯ ಪಲ್ಲಟಗಳು ಹಾಗೂ ಗದ್ದಲಗಳ ಬಗೆಗೆ ಹೆಚ್ಚು ತಲೆಕೆಡಿಸಿಕೊಳ್ಳಲು ಹೋಗಬಾರದು.

**3. ರಿಸ್ಕ್‌ಗಳನ್ನು ಅರ್ಥ ಮಾಡಿಕೊಳ್ಳದಿರುವುದು:** ನೀವು ಈಕ್ವಿಟಿ ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುತ್ತೀರಿ ಎಂದರೆ ರಿಸ್ಕ್‌ಗೆ ಮುಖಾಮುಖಿಯಾಗುತ್ತೀರಿ ಎಂದೇ ಅರ್ಥ. ನೀವು ಹೂಡಿಕೆ ಮಾಡಿದ ತಕ್ಷಣ ನಿಮ್ಮ ಹೂಡಿಕೆಯ ಮೌಲ್ಯ ತಕ್ಷಣ ಪಾತಾಳಕ್ಕೆ ಕುಸಿಯಬಹುದು ಅಥವಾ ನೆಲಕಚ್ಚಬಹುದು. ಹಾಗಾಗಿ ನೀವು ಎಲ್ಲಿ ಹೂಡಿಕೆ ಮಾಡುತ್ತಿದ್ದೀರಿ ಮತ್ತು ಅಲ್ಲಿ ರಿಸ್ಕ್ ಎಷ್ಟರ ಮಟ್ಟಿಗೆ ಇದೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಬಹುಮುಖ್ಯ. ಇಲ್ಲಿ ಮಾರುಕಟ್ಟೆ ರಿಸ್ಕ್, ಕಂಪನಿ ರಿಸ್ಕ್, ವಲಯ ನಿರ್ದಿಷ್ಟವಾದ ರಿಸ್ಕ್ ಸೇರಿದಂತೆ ಅನೇಕ ರೀತಿಯ ಅಪಾಯಗಳು ಇದ್ದೇ ಇರುತ್ತವೆ. ನಮ್ಮ ಹೂಡಿಕೆಯ ಮಾರ್ಗಗಳನ್ನು ಬದಲಿಸುವುದರಿಂದ ಮತ್ತು ಮ್ಯುಚ್ಯುವಲ್ ಫಂಡ್‌ನಲ್ಲಿ ಹೂಡಿಕೆ ಮಾಡುವುದರಿಂದ ಕೆಲವು ರಿಸ್ಕ್‌ಗಳನ್ನು ನಿಭಾಯಿಸಬಹುದು. ಆದರೂ ಕೆಲವು ರಿಸ್ಕ್‌ಗಳು ಇದ್ದೇ ಇರುತ್ತವೆ. ಹಾಗಂತ ಇದು ಕೇವಲ ಈಕ್ವಿಟಿ ಮಾರುಕಟ್ಟೆಗೆ ಮಾತ್ರ ಸೀಮಿತವಾದುದಲ್ಲ. ಬದಲಾಗಿ ಅದು ಎಲ್ಲ ಆಸ್ತಿ ವರ್ಗಗಳಲ್ಲಿಯೂ ಸಾಮಾನ್ಯ. ರಿಸ್ಕ್ ಮೌಲ್ಯಮಾಪನದ ಸಂದರ್ಭದಲ್ಲಿ ನಾವು ಆಸ್ತಿ ವರ್ಗ ಮತ್ತು ಅವಧಿಯನ್ನು ಮೊದಲು ಅರ್ಥ ಮಾಡಿಕೊಳ್ಳಬೇಕು. ಹೀಗೆ ಮಾಡುವಾಗ ನಿಮ್ಮ ನಿರ್ಧಾರಗಳ ಬಗೆಗೆ ಸರಿಯಾದ ಮಾಹಿತಿ ಇರಲಿ.

**4. ತಾಳ್ಮೆ ಕಳೆದುಕೊಳ್ಳದಿರಿ:** ತಾವು ಮಾಡಿದ ಹೂಡಿಕೆಗೆ ತಕ್ಕುನಾದ ಆದಾಯ ಬಾರದೇ ಹೋದಾಗ ಹೊಸ ಹೂಡಿಕೆದಾರರು ಮಾಡುವ ಬಹುದೊಡ್ಡ ತಪ್ಪು ಏನೆಂದರೆ ಅಸಮಾಧಾನಕ್ಕೆ ಒಳಗಾಗುವುದು. ತಮ್ಮ ನಿರೀಕ್ಷೆಗೆ ತಕ್ಕಂತೆ ಹೂಡಿಕೆ ನಿರ್ವಹಣೆ ತೋರದೇ ಇದ್ದಾಗ ತಾಳ್ಮೆ ಕಳೆದುಕೊಂಡು ಇನ್ನೊಂದು ಹೂಡಿಕೆಗೆ ಮನಸ್ಸು ಬದಲಿಸುವುದು. ಮಾರುಕಟ್ಟೆಯಲ್ಲಿ ಏರಿಳಿತ ಸಂಭವಿಸಿದಾಗ ಅಥವಾ ಮೌಲ್ಯದಲ್ಲಿ ತಾತ್ಕಾಲಿಕ ಕುಸಿತ ಉಂಟಾದಾಗ ಇಂತಹ ಪರಿಸ್ಥಿತಿ ಕಾಣಬಹುದು. ಷೇರು ಮಾರುಕಟ್ಟೆ ಸುದೀರ್ಘಾವಧಿ ವಹಿವಾಟಾದ ಕಾರಣ ಅಲ್ಪಾವಧಿಯ ಏರಿಳಿತಗಳಿಂದ ತಾಳ್ಮೆ ಕಳೆದುಕೊಳ್ಳಬಾರದು. ಹಾಗೆ ಮಾಡಿದರೆ ಅದು ನಿಮ್ಮ ಹೂಡಿಕೆಯ ನಿರ್ಧಾರಗಳ ದಾರಿಯನ್ನು ಬದಲಿಸುತ್ತದೆ. ಸುದೀರ್ಘಾವಧಿ ಆದಾಯದ ಬಗ್ಗೆ ನಿಮಗೆ ನಂಬಿಕೆ ಇದ್ದರೆ ಸಣ್ಣ ಪುಟ್ಟ ಏರಿಳಿತಗಳ ಬಗ್ಗೆ ತಲೆ ಕೆಡಿಸಿಕೊಳ್ಳಬಾರದು. ಒಂದು ವೇಳೆ ನೀವು ಅಲ್ಪಾವಧಿ ಹೂಡಿಕೆಗಳನ್ನು ಮಾಡಿದ್ದರೆ ಬಹಳ ಬೇಗ ಮಾರಾಟಕ್ಕೆ ಮನಸ್ಸು ಮಾಡುತ್ತೀರಿ. ಇದರಿಂದ ಸಂಭಾವ್ಯ ಅಧಿಕ ಲಾಭದಿಂದ ವಂಚಿತರಾಗುತ್ತೀರಿ.

**5. ಸಾಮಾಜಿಕ ಮಾಧ್ಯಮವನ್ನು ನಂಬುವುದು ಮತ್ತು ಗದ್ದಲಕ್ಕೆ ಕಿವಿಯಾಗುವುದು:** ಸಾಮಾಜಿಕ ಮಾಧ್ಯಮ ಉತ್ತಮ ಮಾಹಿತಿಗಳ ಕಣಜ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಆದರೆ ಅಲ್ಲಿ ಕೆಲವು ಹಾದಿ ತಪ್ಪಿಸುವ ಮಾಹಿತಿಗಳೂ ಇರುತ್ತವೆ. ಸಾಮಾಜಿಕ ಮಾಧ್ಯಮದಲ್ಲಿ ಕಂಡಿದ್ದನ್ನು ನಂಬುವ ವಿಚಾರದಲ್ಲಿ ಹೊಸ ಹೂಡಿಕೆದಾರರು ಅತ್ಯಂತ ಎಚ್ಚರಿಕೆಯಿಂದ ಇರಬೇಕು. ಮಾಧ್ಯಮದಲ್ಲಿ ಉತ್ತಮ ಟಿಆರ್‌ಪಿಯನ್ನು ಗಳಿಸುವ ಕಾರಣಕ್ಕೆ ಅವರು ದಿನವೂ ಒಂದೊಂದು ರೀತಿಯ ಸುದ್ದಿಗಳನ್ನು ಹರಿಯಬಿಡಬಹುದು. ಆದರೆ ನಿಮ್ಮ ನೋಟ ಬಹಳ ದೂರದ್ದು ಎಂಬುದನ್ನು ಮರೆಯಬಾರದು. ಇದರ ಜೊತೆಗೆ ಫಾಲೋವರ್‌ಗಳನ್ನು ಪಡೆಯುವ ಹುಚ್ಚಿಗೆ ಬಿದ್ದ ಮಾಧ್ಯಮಗಳು ಸುಳ್ಳು ಮತ್ತು ಹಣಮಾಡುವ ವರದಿಗಳನ್ನು ಬಿಂಬಿಸುವ ಸಾಧ್ಯತೆ ಕೂಡ ಇರುತ್ತದೆ. ಮಾಧ್ಯಮದ ಕಡೆಯಿಂದ ಯಾವುದೇ ಮಾಹಿತಿ ಲಭ್ಯವಾದರೂ ಅದನ್ನು ಪರಿಶೀಲಿಸುವ ಮತ್ತು ಅಧ್ಯಯನ ಮಾಡುವ ಮನಸ್ಥಿತಿಯನ್ನು ಬೆಳೆಸಿಕೊಳ್ಳಿ. ಹೂಡಿಕೆಯ ಬಗೆಗೆ ಯಾವುದೇ ಸಲಹೆ ಬಂದರೂ ಅದು ಸತ್ಯವೇ ಎಂಬುದನ್ನು ಪರಾಂಭರಿಸಿ ನೋಡುವುದು ಮುಖ್ಯ.



**ಹೂಡಿಕೆಯ ಪಯಣದಲ್ಲಿ ಯಾವುದನ್ನು ಮಾಡಬೇಕು ಮತ್ತು ಮಾಡಬಾರದು ಎಂಬುದನ್ನು ಅರ್ಥ ಮಾಡಿಕೊಳ್ಳುವುದು ನಿರಂತರ ಕಲಿಕೆ. ಆದರೆ ಹೊಸ ಹೂಡಿಕೆದಾರರಿಗೆ ಮೇಲಿನ ಅಂಶಗಳು ಮಾರ್ಗದರ್ಶಿಯಾದರೆ ಅದೇ ಸಾರ್ಥಕ.**

**6. ಮಾರುಕಟ್ಟೆ ಸಮಯವನ್ನು ಬೀಟ್ ಮಾಡುವುದು:** ಕೆಲವು ಹೊಸ ಹೂಡಿಕೆದಾರರು ಮಾರುಕಟ್ಟೆ ಸಮಯವನ್ನು ಬೀಟ್ ಮಾಡುವ ಪ್ರಯತ್ನದಲ್ಲಿರುತ್ತಾರೆ. ಆದರೆ ಇದನ್ನು ಬಹಳ ಕಾಲ ಮಾಡಲು ಸಾಧ್ಯವಿಲ್ಲ. ಕೆಲವು ವೃತ್ತಿಪರ ಹೂಡಿಕೆದಾರರು ಕೂಡ ಇದರಲ್ಲಿ ಸೋಲುತ್ತಾರೆ. ಹಾಗಾಗಿ ಇದರಲ್ಲಿ ಸಂಪೂರ್ಣ ಪ್ರಬುದ್ಧತೆ ಸಾಧಿಸುವುದು ಕಷ್ಟದ ಕೆಲಸ. ಮಾರುಕಟ್ಟೆಯ ಸಮಯವನ್ನು ಬೀಟ್ ಮಾಡುವುದಕ್ಕಿಂತ ನಿಮ್ಮ ರಿಸ್ಕ್ ಪ್ರೊಫೈಲ್‌ಗೆ ತಕ್ಕಂತೆ ನಿರಂತರವಾಗಿ ಹೂಡಿಕೆ ಮಾಡುತ್ತ ಹೋಗುವುದು ಉತ್ತಮ. ಮಾರುಕಟ್ಟೆ ಸಮಯಕ್ಕೆ ತಕ್ಕಂತೆ ಗತಿಯನ್ನು ಕಾಯ್ದುಕೊಳ್ಳಲು ಪ್ರತಿ ತಿಂಗಳು ಹೂಡಿಕೆ ಮಾಡುವಂತಹ ಮ್ಯುಚ್ಯುವಲ್ ಫಂಡ್‌ನಲ್ಲಿ ಎಸ್‌ಐಪಿಯನ್ನು ಆಯ್ಕೆ ಮಾಡಿಕೊಳ್ಳುವುದು. ಇದರಲ್ಲಿ ನೀವು ಮಾರುಕಟ್ಟೆ ಕುಸಿತ ಅನುಭವಿಸಿದಾಗ ಹೆಚ್ಚು ಮ್ಯುಚ್ಯುವಲ್ ಫಂಡ್ ಯೂನಿಟ್‌ಗಳನ್ನು ಖರೀದಿ ಮಾಡಿರುತ್ತೀರಿ ಮತ್ತು ಮಾರುಕಟ್ಟೆ ಏರುಗತಿಯಲ್ಲಿದ್ದಾಗ ಕಡಿಮೆ ಖರೀದಿ ಮಾಡಿರುತ್ತೀರಿ. ಸುದೀರ್ಘಾವಧಿ ತನಕ ಈ ಗತಿಯನ್ನು ಕಾಯ್ದಿಟ್ಟುಕೊಂಡರೆ ಗರಿಷ್ಠ ಆದಾಯ ಗಳಿಸಲು ಸಾಧ್ಯವಾಗುತ್ತದೆ.

**7. ಹೂಡಿಕೆಯೊಂದಿಗೆ ಮಿಶ್ರ ಟ್ರೇಡಿಂಗ್:** ತಕ್ಷಣ ಲಾಭ ಗಳಿಸುವ ಉದ್ದೇಶದೊಂದಿಗೆ ಅಲ್ಪಾವಧಿಯಲ್ಲಿ ಷೇರುಗಳನ್ನು ಖರೀದಿಸಿ ಮಾರಾಟ ಮಾಡುವುದನ್ನು ಟ್ರೇಡಿಂಗ್ ಎನ್ನುತ್ತೇವೆ. ಹೂಡಿಕೆ ಎಂದರೆ ಮಾಡಿದ ಖರೀದಿಯನ್ನು

ಸಂಪತ್ತು ಸೃಷ್ಟಿಸುವ ಉದ್ದೇಶದೊಂದಿಗೆ ಸುದೀರ್ಘ ಕಾಲ ಕಾಯ್ದಿಟ್ಟುಕೊಳ್ಳುವುದು. ಟ್ರೇಡಿಂಗ್ ಎನ್ನುವುದು ಅತ್ಯಂತ ಅಪಾಯಕಾರಿ ಕೆಲಸ, ಅದು ವೃತ್ತಿಪರರಿಂದ ಮಾತ್ರ ಮಾಡಲು ಸಾಧ್ಯ. ದುರದೃಷ್ಟದ ಸಂಗತಿ ಎಂದರೆ ಕ್ರಿಪ್ಟೋ–ಕರೆನ್ಸಿಯೇ ಬಹುದೊಡ್ಡ ಹೂಡಿಕೆಯ ದಾರಿಗಳಾಗಿರುವ ಈ ಹೊತ್ತಿನಲ್ಲಿ ಟ್ರೇಡಿಂಗ್‌ನ್ನೇ ಹೂಡಿಕೆ ಎಂದು ಪರಿಭಾವಿಸಿದ್ದರಲ್ಲಿ ಅಚ್ಚರಿ ಏನೂ ಇಲ್ಲ. ಇಂತಹ ಟ್ರೇಡಿಂಗ್‌ಗಳ ಮೂಲಕ ತಕ್ಕಮಟ್ಟಿನ ಲಾಭ ಮಾಡುವಲ್ಲಿ ಯಶಸ್ವಿಯಾಗಿರುವುದು ಕೆಲವೇ ಕೆಲವು ಮಂದಿ. ಆದರೆ ಅದರ ಬಗ್ಗೆ ಪುಂಖಾನುಪುಂಖವಾಗಿ ಮಾಧ್ಯಮ ವರದಿಗಳು ಬಂದಿವೆ. ಹೂಡಿಕೆದಾರರಾಗಿ ನಾವು ಇವೆರಡರ ನಡುವೆ ಇರುವ ವ್ಯತ್ಯಾಸಗಳನ್ನು ಗಮನಿಸಬೇಕು. ಹೂಡಿಕೆ ಎಂದರೆ ಸುದೀರ್ಘಾವಧಿಯದ್ದು ಮತ್ತು ತಾಳ್ಮೆಯನ್ನು ಬಯಸುವಂತಾದ್ದು ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

**8. ಅನುಭವವಿಲ್ಲದ ನೇರ ಹೂಡಿಕೆ:** ಹೊಸ ಹೂಡಿಕೆದಾರರು ಆರಂಭಿಕ ವರ್ಷಗಳಲ್ಲಿ ತಮ್ಮ ಬಂಡವಾಳ ಪಟ್ಟಿಯನ್ನು ಖಾಲಿ ಮಾಡಿಕೊಂಡಿದ್ದಾರೆ ಎಂಬುದನ್ನು ಸಾಕಷ್ಟು ಅಧ್ಯಯನಗಳು ತೋರಿಸುತ್ತವೆ. ಇದರ ಜೊತೆಗೆ ಯಾವುದೇ ಅನುಭವದ ಹಿನ್ನೆಲೆ ಇಲ್ಲದೆ ತಾವಾಗಿಯೇ ಹೂಡಿಕೆಯನ್ನು ಮಾಡುವವರು ತಮ್ಮ ಹೂಡಿಕೆ ಪಯಣವನ್ನು ಬಹಳ ಬೇಗ ಮುಕ್ತಾಯಗೊಳಿಸಿರುವ ಸಾಧ್ಯತೆಗಳೇ ಅಧಿಕ. ಉತ್ತಮ ನಿರ್ವಹಣೆಯ ಹೂಡಿಕೆಯನ್ನು ಪತ್ತೆ ಮಾಡಿ ಅದರಲ್ಲಿ ಹೂಡಿಕೆ ಮಾಡುವುದು ಹೊಸ ಹೂಡಿಕೆದಾರರ ಪಾಲಿಗೆ ಅತ್ಯಗತ್ಯವಾದುದು. ಈ ಕ್ಷೇತ್ರದಲ್ಲಿ ಅತ್ಯುತ್ತಮ ನಿರ್ವಹಣೆ ತೋರುವವರು ಆಗಾಗ ಬದಲಾವಣೆ ಮಾಡುತ್ತಿರುವ ಅಧ್ಯಯನಗಳು ಕೂಡ ನಮ್ಮ ಮುಂದೆ ಇವೆ. ಫಂಡ್ ಆಯ್ಕೆ ಇವೆಲ್ಲವನ್ನೂ ಮೀರಿದ್ದು. ಇಂತಹ ಅವಸರದ ಹೂಡಿಕೆಗಳು ನೀವು ಅನುಭವಿಯಲ್ಲ ಮತ್ತು ಹೂಡಿಕೆ ವಿಚಾರದಲ್ಲಿ ನೀವು ಸಾಕಷ್ಟು ಕಲಿಯುವುದು ಬಾಕಿ ಇದೆ ಎಂಬುದನ್ನು ತೋರಿಸುತ್ತದೆ. ಹಾಗಾಗಿ ನಿಮ್ಮ ಜರ್ನಿಯನ್ನು ಆರಂಭ ಮಾಡುವುದಕ್ಕೂ ಮುನ್ನ ಹೂಡಿಕೆ ನಿಲುವಿಗೆ ಸ್ಪಷ್ಟವಾದ ರೂಪವನ್ನು ಕೊಡಲು ಮ್ಯುಚ್ಯುವಲ್ ಫಂಡ್ ವಿತರಕರು ಅಥವಾ ಹೂಡಿಕೆ ಮಾರ್ಗದರ್ಶಕರು ಸೂಕ್ತ ಸಹಾಯವನ್ನು ನೀಡಬಲ್ಲರು.

**ಕೊನೆಯ ಮಾತು:** ಹೂಡಿಕೆಯಲ್ಲಿ ಕಲಿಯುವುದಕ್ಕೆ ಕೊನೆ ಎಂಬುದಿಲ್ಲ. ಜೀವನವಿಡೀ ಅದರಿಂದ ಕಲಿಯುತ್ತ ಹೋಗಬಹುದು. ನಿಮಗೆ ಹೆಚ್ಚು ಹೆಚ್ಚು ಅನುಭವವಾಗುತ್ತ ಹೋದ ಹಾಗೆ ಅದನ್ನೊಂದು ಕಲೆಯ ರೂಪದಲ್ಲಿ ಅಭ್ಯಾಸ ಮಾಡಿಕೊಳ್ಳುತ್ತ ಹೋಗುತ್ತೀರಿ. ಮೇಲೆ ಪ್ರಸ್ತಾಪ ಮಾಡಿದ ಅಷ್ಟ ಸೂತ್ರಗಳು ಮಾತ್ರವಲ್ಲ ಅದನ್ನು ಮೀರಿದ ಇನ್ನೂ ಕೆಲವು ಅಂಶಗಳಿವೆ. ಹೂಡಿಕೆಯ ಪಯಣದಲ್ಲಿ ಯಾವುದನ್ನು ಮಾಡಬೇಕು ಮತ್ತು ಮಾಡಬಾರದು ಎಂಬುದನ್ನು ಅರ್ಥ ಮಾಡಿಕೊಳ್ಳುವುದು ನಿರಂತರ ಕಲಿಕೆ. ಆದರೆ ಹೊಸ ಹೂಡಿಕೆದಾರರಿಗೆ ಮೇಲಿನ ಅಂಶಗಳು ಮಾರ್ಗದರ್ಶಿಯಾದರೆ ಅದೇ ಸಾರ್ಥಕ. ■

ನಿಮ್ಮ ವೈಯಕ್ತಿಕ ಹಣಕಾಸು ಅನುಪಾತಗಳನ್ನು ಅರ್ಥಮಾಡಿಕೊಂಡು ಬಳಸುವುದರಿಂದ ನಿಮ್ಮದೇ ಹಣಕಾಸು ಪರಿಸ್ಥಿತಿಯ ಬಗ್ಗೆ ಮೌಲ್ಯಯುತವಾದ ಒಳನೋಟ ಲಭ್ಯವಾಗುತ್ತದೆ



# ಖಾಸಗಿ ಹಣಕಾಸಿನ ನಿರ್ವಹಣೆ ಮಾರ್ಗಗಳು

ನಾಗಲೋಟದಲ್ಲಿ ಓಡುತ್ತಿರುವ ಇಂದಿನ ಜಗತ್ತಿನಲ್ಲಿ ಎಲ್ಲ ಬೇಕು–ಬೇಡಗಳನ್ನು ಪೂರೈಸಿಕೊಳ್ಳುತ್ತ ನಮ್ಮ ಖಾಸಗಿ ಹಣಕಾಸನ್ನು ನಿಭಾಯಿಸುವುದು ನಿಜಕ್ಕೂ ಸವಾಲಿನ ಕೆಲಸ. ನೀವದನ್ನು ವೃತ್ತಿಪರ ತಜ್ಞರಿಂದ ನಿಭಾಯಿಸುತ್ತೀರೋ ಅಥವಾ ನೀವಾಗಿಯೇ ಎಲ್ಲವನ್ನೂ ಮಾಡುತ್ತ ಹೋಗುತ್ತೀರೋ ನಿಮ್ಮದೇ ಹಣಕಾಸಿನ ಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದು ಅತ್ಯಂತ ನಿರ್ಣಾಯಕ. ನಿಮ್ಮ ಅರ್ಥ ವ್ಯವಸ್ಥೆಯ ಬಲ ಮತ್ತು ದೌರ್ಬಲ್ಯಗಳನ್ನು ಅಳೆಯಲು ಇರುವ ಒಂದು ಪರಿಣಾಮಕಾರಿ ಮಾರ್ಗವೆಂದರೆ ಹಣಕಾಸು ಅನುಪಾತಗಳನ್ನು ಬಳಸುವುದು. ಈ ಅನುಪಾತಗಳು ನಿಮ್ಮ ಹಣಕಾಸು ಆರೋಗ್ಯದ ಪ್ರಮಾಣಾತ್ಮಕ ವಿಶ್ಲೇಷಣೆಯನ್ನು ನೀಡುತ್ತದೆ ಮತ್ತು ಖಾಸಗಿ ಹಣಕಾಸಿನ ನಾನಾ ಅಂಶಗಳಿಗೆ ಸಂಬಂಧಿಸಿದಂತೆ ಮಾಹಿತಿಪೂರ್ಣ ನಿರ್ಧಾರಗಳನ್ನು ಕೈಗೊಳ್ಳಲು ಸಹಾಯ ಮಾಡುತ್ತದೆ. ಈ ಲೇಖನದಲ್ಲಿ ಆರು ಸಾಮಾನ್ಯ ಹಣಕಾಸು ಅನುಪಾತಗಳನ್ನು ಪರಿಶೋಧಿಸಲಾಗಿದ್ದು ಇದರಿಂದ ನಿಮ್ಮ ಈಗಿನ ಹಣಕಾಸಿನ ಸ್ಥಿತಿಗತಿಯ ಮೌಲ್ಯಮಾಪನ ಮಾಡಲು ಮತ್ತು ಹಣಕಾಸು ಯೋಗ–ಕ್ಷೇಮಕ್ಕೆ ಗಟ್ಟಿ ತಳಪಾಯ ಹಾಕಲು ಸಾಧ್ಯವಾಗುತ್ತದೆ.

**1. ತುರ್ತುನಿಧಿ ಅನುಪಾತ:** ಯಾವುದೇ ಹಣಕಾಸು ಸ್ಥಿರತೆಗೆ ತುರ್ತುನಿಧಿ ಅತ್ಯಗತ್ಯ. ಉದ್ಯೋಗ ಕಳೆದುಕೊಂಡಾಗ ಅಥವಾ ಇನ್ನಿತರ ತುರ್ತು ಪರಿಸ್ಥಿತಿಗಳು ಎದುರಾದಾಗ ನಿಮಗೆ ಸುರಕ್ಷತಾ ಕವಚದ ರೂಪದಲ್ಲಿ ಇದು ಕೆಲಸ ಮಾಡುತ್ತದೆ ಮತ್ತು ತಕ್ಷಣ ಅಗತ್ಯವಿರುವ ಹಣದ ಅನುಕೂಲಕ್ಕೆ ದಾರಿ ಮಾಡಿಕೊಡುತ್ತದೆ. ಈ ತುರ್ತುನಿಧಿಯು ಅನಿವಾರ್ಯ ಪರಿಸ್ಥಿತಿ ಎದುರಾದಾಗ ನಿಮ್ಮ ನಗದು ಉಳಿತಾಯಗಳು ಎಷ್ಟು ತಿಂಗಳ ಕಾಲ ನಿಭಾಯಿಸಬಹುದು ಎಂಬುದನ್ನು ನಿರ್ಧರಿಸುತ್ತದೆ. ಅಂದರೆ ಯಾವುದೇ ಆದಾಯ ಇಲ್ಲದೆ ಎಷ್ಟು ತಿಂಗಳ ಕಾಲ ಆರಾಮವಾಗಿ ಇರಬಹುದು ಎಂಬುದನ್ನು ತೋರಿಸುತ್ತದೆ.

ಈ ಅನುಪಾತದ ಲೆಕ್ಕಾಚಾರ ಮಾಡಿ. ನಿಮ್ಮ ನಗದು ಉಳಿತಾಯ ಅಥವಾ ಹೂಡಿಕೆಗಳನ್ನು ಗೃಹೋಪಯೋಗಿ ಖರ್ಚುಗಳು, ಬಾಡಿಗೆ, ಶೈಕ್ಷಣಿಕ ಶುಲ್ಕಗಳು, ಇಎಂಐ ಮತ್ತು ಇತರ ಗೃಹಕೃತ್ಯದ ಖರ್ಚುಗಳನ್ನು ಒಳಗೊಂಡ ನಿಮ್ಮ ತಿಂಗಳ ಅನಿವಾರ್ಯ ವೆಚ್ಚಗಳಿಂದ ವಿಭಾಗಿಸಿ. ತುರ್ತು ನಿಧಿಯನ್ನು ಕಾಯ್ದುಕೊಳ್ಳುವುದು ಎಂದರೆ ಕನಿಷ್ಠ ಮೂರರಿಂದ ಆರು ತಿಂಗಳ ಈ ವೆಚ್ಚಗಳನ್ನು ನಿಭಾಯಿಸುವುದಕ್ಕೆ ಸಮಾನ ಎಂದು ಹಣಕಾಸು ತಜ್ಞರು ಸಾಮಾನ್ಯವಾಗಿ ಶಿಫಾರಸು ಮಾಡುತ್ತಾರೆ. ಈ ತುರ್ತು ನಿಧಿ ದೊಡ್ಡದಿದ್ದಷ್ಟೂ ಕಣ್ಣಿಗೆ ಕಾಣದ ವಿದ್ಯಮಾನಗಳನ್ನು ನಿಭಾಯಿಸಲು ನೀವು ಉತ್ತಮ ಸಿದ್ಧತೆ ಮಾಡಿಕೊಂಡಿದ್ದೀರಿ ಎಂದು ಅರ್ಥ.

**2. ಉಳಿತಾಯದ ಅನುಪಾತ:** ಭವಿಷ್ಯದ ಹಣಕಾಸು ಗುರಿಗಳಿಗಾಗಿ ಉಳಿತಾಯ ಮಾಡುವುದು ಮತ್ತು ಹೂಡಿಕೆ ಮಾಡುವುದು ವೈಯಕ್ತಿಕ ಹಣಕಾಸಿನ ಬಹುಮುಖ್ಯ ಭಾಗ. ನಿಮ್ಮ ಉಳಿತಾಯದ ಅನುಪಾತವೆಂದರೆ ನೀವು ಉಳಿತಾಯ ಮಾಡಿದ ಆದಾಯದ ಒಂದು ಭಾಗ ಹಾಗೂ ನಿಮ್ಮ ನಿವೃತ್ತಿ, ಮಕ್ಕಳ ಶಿಕ್ಷಣ, ಮನೆ/ಕಾರು ಖರೀದಿ ಇತರ ಅನೇಕ ಗುರಿಗಳ ಹೊರತಾಗಿಯೂ ಮಾಡಿದ ಹೂಡಿಕೆ. ಆರೋಗ್ಯಪೂರ್ಣವಾದ ಉಳಿತಾಯಕ್ಕಾಗಿ ಪ್ರತಿ ತಿಂಗಳು ನಿಮ್ಮ ಆದಾಯದಲ್ಲಿ ಕನಿಷ್ಠ 10ರಿಂದ 15ರಷ್ಟು ಉಳಿತಾಯ ಮಾಡಬೇಕು ಎಂದು ಶಿಫಾರಸು ಮಾಡಲಾಗುತ್ತದೆ. ಆದರೆ ನಿಮ್ಮ ನಿರ್ದಿಷ್ಟ ಗುರಿಗಳು ಮತ್ತು ವಯಸ್ಸು ಹಾಗೂ ನೀವು ನಿಭಾಯಿಸುವ ಉಳಿತಾಯದ ಮೊತ್ತದ ಆಧಾರದಲ್ಲಿ ನಿಮ್ಮ ನ್ಯಾಯಸಮ್ಮತ ಉಳಿತಾಯದ ದರದಲ್ಲಿ ಏರಿಳಿತ ಉಂಟಾಗಬಹುದು. ನೀವು ಇನ್ನೂ ಯುವಕರಾಗಿದ್ದರೆ ಆದಾಯವು ಕಡಿಮೆಯಾಗಿದ್ದು ಖರ್ಚು ಹೆಚ್ಚಾಗಿರುವ ಸಾಧ್ಯತೆ ಇರುತ್ತದೆ. ಇಂತಹ ಸಂದರ್ಭದಲ್ಲಿ ಉಳಿತಾಯ ಕಡಿಮೆ ಇರಬಹುದು. ಆದರೆ, ನಿಮ್ಮ ಜೀವನದಲ್ಲಿ ಅಧಿಕ ಆದಾಯದೊಂದಿಗೆ ಕೂಡಿಡುವ ಹಂತವನ್ನು ತಲುಪಿದಾಗ ಸಾಧ್ಯವಾದಷ್ಟು ಉಳಿತಾಯ ಮಾಡಬೇಕು. ನಿಮ್ಮ ಉಳಿತಾಯದ ದರವನ್ನು ಆಗಾಗ ಮೌಲ್ಯಮಾಪನ ಮಾಡುವುದರಿಂದ ಅಗತ್ಯವಿರುವ ಹೊಂದಾಣಿಕೆಗಳನ್ನು ಮಾಡಲು ಸಾಧ್ಯ. ಉಳಿತಾಯಕ್ಕೆ ಹೆಚ್ಚು ಆದ್ಯತೆಯನ್ನು ಕೊಟ್ಟು ಖರ್ಚುಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸಿದರೆ ನೀವು ಭವಿಷ್ಯಕ್ಕಾಗಿ ಗಟ್ಟಿಯಾದ ಹಣಕಾಸು ಅಡಿಪಾಯವನ್ನು ಹಾಕಬಹುದು.




**3. ಸಾಲದ ಬಳಿಕ ಒಟ್ಟು ಆಸ್ತಿ ಅನುಪಾತ:** ಈ ಅನುಪಾತವು ನಿಮಗೆ ಸಾಲ ನೀಡಿದವರು ಹೊಂದಿದ ನಿಮ್ಮ ಆಸ್ತಿಯ ಭಾಗದ ಚಿತ್ರಣವನ್ನು ನೀಡುತ್ತದೆ. ಈ ಸಾಲಗಳಲ್ಲಿ ನಿಮ್ಮ ಗೃಹ ಸಾಲ, ಕಾರಿನ ಸಾಲ, ವೈಯಕ್ತಿಕ ಸಾಲ, ಕ್ರೆಡಿಟ್ ಕಾರ್ಡ್‌ನ ಒಟ್ಟು ಬಾಕಿ ಇತ್ಯಾದಿ ಸೇರಿವೆ. ಈ ಸಾಲಗಳನ್ನು ನೀವು ನೀಡುತ್ತ ಹೋದ ಹಾಗೆ ನಿಮ್ಮ ಅನುಪಾತಗಳು ಕಡಿಮೆಯಾಗುತ್ತ ಹೋಗುತ್ತವೆ. ಈ ಅನುಪಾತವು ಸಾಮಾನ್ಯವಾಗಿ ತಾರುಣ್ಯದಲ್ಲಿ ಹೆಚ್ಚಾಗಿರುತ್ತದೆ ಮತ್ತು ವಯಸ್ಸಾಗುತ್ತ ಮತ್ತು ಆಸ್ತಿಗಳನ್ನು ನಿರ್ಮಿಸುತ್ತ ಸಾಲಗಳನ್ನು ಕಟ್ಟುತ್ತ ಹೋದ ಹಾಗೆ ತಗ್ಗುತ್ತದೆ. ನೀವು ನಿವೃತ್ತಿಯ ಅಂಚಿಗೆ ಸರಿದಾಗ ಸಾಲದ ಒಟ್ಟು ಆಸ್ತಿಯ ಅನುಪಾತ ಕಡಿಮೆಯಾದರೆ ಅದು ಆರೋಗ್ಯಪೂರ್ಣ ಹಣಕಾಸು ಪರಿಸ್ಥಿತಿಯನ್ನು ಸೂಚಿಸುತ್ತದೆ. ಇದು ವೈಯಕ್ತಿಕ ಹಣಕಾಸು ಯೋಗಕ್ಷೇಮ ಉತ್ತಮ ಸೂಚನೆ ಕೂಡ ಹೌದು. ನಿಮ್ಮ ಒಟ್ಟು ಆಸ್ತಿಯನ್ನು ಒಟ್ಟು ಸಾಲದಿಂದ ವಿಭಾಗಿಸಿದಾಗ ಈ ಅನುಪಾತ ಲಭ್ಯವಾಗುತ್ತದೆ. ಈ ಅನುಪಾತವನ್ನು ಯಾವತ್ತೂ ಕಡಿಮೆ ಇಟ್ಟುಕೊಳ್ಳುವುದು ಉತ್ತಮ. ಇದು ನಿಮ್ಮ ಸಾಲದ ಹೊರೆ ಕಡಿಮೆ ಇದೆ ಎಂಬುದನ್ನು ಸೂಚಿಸುತ್ತದೆ.

**4. ಒಟ್ಟು ಆಸ್ತಿಯ ನಿವ್ವಳ ಮೌಲ್ಯ:** ನಿಮ್ಮ ಆಸ್ತಿ ಮತ್ತು ಸಾಲಗಳ ನಡುವಿನ ವ್ಯತ್ಯಾಸವೇ ನಿವ್ವಳ ಮೌಲ್ಯ. ನೀವು ಹೊಂದಿರುವ ಸಾಲವನ್ನು ಕಳೆದಾಗ ಲಭ್ಯವಾಗುವ ಮೌಲ್ಯವಿದು. ಇದನ್ನು ಇನ್ನೊಂದು ಅರ್ಥದಲ್ಲಿ ಋಣ ಪರಿಹಾರ ಸಾಮರ್ಥ್ಯ ಎಂದೂ ಕರೆಯುತ್ತೇವೆ. ನಿಮ್ಮ ಜೀವನದ ಅವಧಿಯಲ್ಲಿ ಈ ಅನುಪಾತದ ಜಾಡು ಹಿಡಿಯುವುದರಿಂದ ಸಂಗ್ರಹವಾಗಿರುವ ಒಟ್ಟು ಸಂಪತ್ತಿನ ಮೌಲ್ಯವನ್ನು ಮೇಲ್ವಿಚಾರಣೆ ಮಾಡಲು ಸಾಧ್ಯವಾಗುತ್ತದೆ ಹಾಗೂ ಸಾಲ ಮರುಪಾವತಿಗೆ ಉತ್ತೇಜನ ದೊರೆಯುತ್ತದೆ. ಇದು ಈ ಹಿಂದಿನ ಸಾಲದ ಅನುಪಾತಕ್ಕೆ ಸಮನಾಗಿದ್ದರೂ ಕೂಡ ಇಲ್ಲಿ ನಿಮ್ಮ ನಿಜವಾದ ಒಟ್ಟು ಸಂಪತ್ತಿನ ಮೌಲ್ಯಮಾಪನ ಮಾಡಬಹುದು, ಬದಲಾಗಿ ಸಾಲದ ಬಳಿಕ ಇರುವ ಒಟ್ಟು ಆಸ್ತಿಯಲ್ಲ. ಯುವಕರಲ್ಲಿ ಈ ಅನುಪಾತ ಸಾಮಾನ್ಯವಾಗಿ ಶೇ.20ರಷ್ಟಿದ್ದರೆ ನಿವೃತ್ತಿಗೆ ಹತ್ತಿರವಿರುವ ವ್ಯಕ್ತಿಗಳಲ್ಲಿ ಶೇ.90ರಿಂದ 100ರಷ್ಟಿರುತ್ತದೆ. ಅಧಿಕ ಪ್ರಮಾಣದ ಅನುಪಾತವು ಸಾಲದಿಂದ ಮುಕ್ತವಾಗಿ ಸಂಪತ್ತನ್ನು ಕ್ರೋಢೀಕರಿಸುವಲ್ಲಿ ಗಮನಾರ್ಹ ಪ್ರಗತಿ ಸಾಧಿಸಲಾಗಿದೆ ಎಂಬುದನ್ನು ತೋರಿಸುತ್ತದೆ.

**5. ಸಂಪತ್ತು ಪಟ್ಟಿಯ ಲಿಕ್ವಿಡಿಟಿ:** ಲಿಕ್ವಿಡಿಟಿ ಮತ್ತು ವಿಲೇವಾರಿ ಮಾಡಬಹುದಾದ ಆಸ್ತಿಯಲ್ಲಿರುವ ನಿಮ್ಮ ಒಟ್ಟು ನಿವ್ವಳ ಮೌಲ್ಯದ ಭಾಗ ಎಷ್ಟು ಎಂಬುದನ್ನು ಈ ಅನುಪಾತ ತೋರಿಸುತ್ತದೆ. ಇದು ನಿಮ್ಮ ಹಣಕಾಸು ಗುರಿಯನ್ನು ಅವಲಂಬಿಸಿರುತ್ತದೆ ಮತ್ತು ಅದರ ಆಧಾರದಲ್ಲಿಯೇ ಮೌಲ್ಯಮಾಪನ ಮಾಡಬೇಕು. ನೀವು ಅಲ್ಪಾವಧಿಯ ಗುರಿಗಳನ್ನು ಹೊಂದಿದ್ದರೆ ಅಥವಾ ನೀವು ಗುರಿಗಳನ್ನು ತಲುಪುವ ಹಂತದಲ್ಲಿದ್ದರೆ ಲಿಕ್ವಿಡ್ ಆಸ್ತಿಯ ಅಧಿಕ ಅನುಪಾತವನ್ನು ನಿರೀಕ್ಷೆ ಮಾಡಬಹುದು. ಸಾಮಾನ್ಯವಾಗಿ ಕೆಲವೊಮ್ಮೆ ನಮ್ಮ ಸಂಪತ್ತು ಅಥವಾ ಒಟ್ಟು ಆಸ್ತಿ ಮೌಲ್ಯವು ಭೂಮಿ, ಆಸ್ತಿ, ಚಿನ್ನ ಮತ್ತಿತರ ಆಸ್ತಿಗಳಲ್ಲಿ ಸಿಕ್ಕುಹಾಕಿಕೊಂಡಿರುತ್ತದೆ. ಇವುಗಳನ್ನು ತುರ್ತಾಗಿ ವಿಲೇವಾರಿ ಮಾಡಲು ಸಾಧ್ಯವಿಲ್ಲ. ಜೊತೆಗೆ ಈಗ ಬಳಕೆ ಮಾಡುತ್ತಿರುವ ಆಸ್ತಿಯನ್ನು ಕೂಡ ಇಲ್ಲಿ ಪರಿಗಣಿಸಬಹುದೇ ಎಂಬ ಚರ್ಚೆ ನಡೆಯುತ್ತಿದೆ. ನಿಮ್ಮ ಒಟ್ಟು ಸಂಪತ್ತು ಪಟ್ಟಿಯ ಲಿಕ್ವಿಡಿಟಿಯ ಮೌಲ್ಯಮಾಪನ ಮಾಡಲು ನಿಮ್ಮ ಒಟ್ಟು ನಿವ್ವಳ ಮೌಲ್ಯದಿಂದ ಲಿಕ್ವಿಡ್ ಆಸ್ತಿಯನ್ನು ವಿಭಾಗಿಸಬೇಕು. ನಿಮ್ಮ ನಿರ್ದಿಷ್ಟ ಹಣಕಾಸು ಉದ್ದೇಶಗಳನ್ನು ಪರಿಗಣಿಸಿ ಹಣಕಾಸು ಮತ್ತು ಹಣಕಾಸೇತರ ಆಸ್ತಿಗಳ ನಡುವೆ ಸಮತೋಲನ ಕಾಯ್ದುಕೊಳ್ಳುವುದು ಮುಖ್ಯ. ಲಿಕ್ವಿಡ್ ಆಸ್ತಿಯಲ್ಲಿ ನಿಮ್ಮ ಬಹುದೊಡ್ಡ ಮೊತ್ತದ ಹಣ ಲಾಕ್ ಆಗಿದ್ದರೂ ಕೂಡ ಹಣವನ್ನು ಸಾಲ ಪಡೆದ ಅನೇಕ ಉದಾಹರಣೆಗಳು ನಮ್ಮ ಮುಂದೆ ಇವೆ.

**6. ಸಾಲ ಮರುಪಾವತಿ ಸಾಮರ್ಥ್ಯ:** ಈ ಅನುಪಾತವು ನಿಮ್ಮ ಸಾಲದ ಮರುಪಾವತಿ ಮಾಡುವ ಸಾಮರ್ಥ್ಯವನ್ನು ಬಿಂಬಿಸುತ್ತದೆ. ನಿಮ್ಮ ಮಾಸಿಕ ಆದಾಯದಿಂದ ಮಾಸಿಕ ಸಾಲ ಮರುಪಾವತಿಯನ್ನು ವಿಭಾಗಿಸುವ ಮೂಲಕ ಇದನ್ನು ಲೆಕ್ಕ ಹಾಕಲಾಗುತ್ತದೆ. ಉತ್ತಮ ಸಾಲ ಮರುಪಾವತಿ ಸಾಮರ್ಥ್ಯವನ್ನು ಸಾಮಾನ್ಯವಾಗಿ ಮೂರನೇ ಒಂದರಷ್ಟು ಅಥವಾ ಅದಕ್ಕಿಂತ ಕಡಿಮೆ ಎಂದು ಪರಿಗಣಿಸಲಾಗುತ್ತದೆ. ಅಂದರೆ ಇದರ ಅರ್ಥ, ನಿಮ್ಮ ಇಎಂಐಗಳಂತಹ ಮಾಸಿಕ ಸಾಲ ಪಾವತಿ ನಿಮ್ಮ ಮಾಸಿಕ ಆದಾಯದ ಮೂರಕ್ಕಿಂತ ಹೆಚ್ಚಾಗಬಾರದು. ಈ ಅನುಪಾತ ಹೆಚ್ಚಾಗುತ್ತಿದ್ದಂತೆ ಅಲ್ಲಿ ಹಣಕಾಸು ಸಮಸ್ಯೆ ಅಧಿಕವಾಗಿದೆ ಎಂದು ಅರ್ಥ. ಅಂದರೆ ಸಾಲದ ಮರುಪಾವತಿಯಲ್ಲಿ ಕಷ್ಟ ಎದುರಿಸುತ್ತಿದ್ದಾರೆ ಎಂದು ಅರ್ಥ ಮಾಡಿಕೊಳ್ಳಬೇಕು. ಜೊತೆಗೆ ಉಳಿತಾಯ ಮಾಡಲು ಸಾಕಷ್ಟು ಉಳಿದಿಲ್ಲ ಹಾಗೂ ಅನಿವಾರ್ಯ ವೆಚ್ಚಗಳನ್ನು ಪಾವತಿ ಮಾಡಲು ಸಾಧ್ಯವಾಗುತ್ತಿಲ್ಲ ಎಂಬುದರ ಸೂಚನೆ. ಆದರೆ ಈ ಅನುಪಾತ ಆಯಾ ಕಾಲಕ್ಕೆ ಬದಲಾಗಬಹುದು. ಬದುಕಿನ ಆರಂಭದಲ್ಲಿ ಇದು ಅತಿಯಾಗಿದ್ದು ಆದಾಯ ಅಧಿಕವಾಗಿದ್ದಾಗ ಕಡಿಮೆಯಾಗಬಹುದು.

**ಕೊನೆಯ ಮಾತು:** ಸಂಕ್ಷಿಪ್ತವಾಗಿ ಹೇಳಬೇಕೆಂದರೆ ನಿಮ್ಮ ವೈಯಕ್ತಿಕ ಹಣಕಾಸು ಅನುಪಾತಗಳನ್ನು ಅರ್ಥಮಾಡಿಕೊಂಡು ಬಳಸುವುದರಿಂದ ನಿಮ್ಮದೇ ಹಣಕಾಸು ಪರಿಸ್ಥಿತಿಯ ಬಗ್ಗೆ ಮೌಲ್ಯಯುತವಾದ ಒಳನೋಟ ಲಭ್ಯವಾಗುತ್ತದೆ ಹಾಗೂ ನೀವು ಮಾಹಿತಿಪೂರ್ಣವಾದ ನಿರ್ಧಾರಗಳನ್ನು ಕೈಗೊಳ್ಳುವಂತೆ ಮಾಡುತ್ತದೆ. ಇಂತಹ ಅನುಪಾತಗಳನ್ನು ಆಗಾಗ ಸಮರ್ಪಕವಾಗಿ ನಿರ್ವಹಣೆ ಮಾಡುವುದರಿಂದ ಮತ್ತು ಅಗತ್ಯ ಹೊಂದಾಣಿಕೆಗಳನ್ನು ಮಾಡಿಕೊಳ್ಳುವುದರಿಂದ ನಿಮ್ಮ ಗುರಿಗಳನ್ನು ಸಾಧಿಸಲು ಬೇಕಾದ ಗಟ್ಟಿಯಾದ ಹಣಕಾಸು ಯೋಜನೆಗಳನ್ನು ರೂಪಿಸಲು ಸಾಧ್ಯವಾಗುತ್ತದೆ. ಈ ವಿಚಾರದಲ್ಲಿ ನೀವು ವೃತ್ತಿಪರರ ಸಲಹೆ ಪಡೆದರೆ ಅಥವಾ ನಿಮ್ಮದೇ ನಿರ್ಧಾರಗಳ ಮೂಲಕ ನಿರ್ವಹಿಸಿದರೆ ಈ ಅನುಪಾತಗಳು ನಿಮ್ಮ ಹಣಕಾಸು ಆರೋಗ್ಯ ಹೇಗಿದೆ ಎಂದು ಅರ್ಥ ಮಾಡಿಕೊಳ್ಳುವುದು ಸುಲಭವಾಗುತ್ತದೆ. ಇದರ ಹಿನ್ನೆಲೆಯಲ್ಲಿ ಅಗತ್ಯವಿರುವ ವಿಷಯಗಳ ಮೇಲೆ ಗಮನ ನೀಡಬಹುದು. ಇಂದೇ ನಿಮ್ಮ ವೈಯಕ್ತಿಕ ಹಣಕಾಸು ಅನುಪಾತದ ಮೌಲ್ಯಮಾಪನ ಆರಂಭಿಸಿ ಹಾಗೂ ಅತ್ಯುತ್ತಮ ಹಣಕಾಸು ಭವಿಷ್ಯಕ್ಕೆ ದಾರಿ ರೂಪಿಸಿ.




# 4 ರಿಸ್ಕ್ ರಕ್ಷಣೆಗೆ ಬೇಕು ವಿಮೆ

**ನಿಮ್ಮ ಸಂಪತ್ತನ್ನು ರಕ್ಷಣೆ ಮಾಡುವಂತಹ ಈ ನಿರ್ಣಾಯಕ ಅಂಶವನ್ನು ನಿರ್ಲಕ್ಷ ಮಾಡುವುದು ತರವಲ್ಲ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.**

ಇದು ನಿಶ್ಚಿತವಾಗಿ ವೇಗದ ಜೀವನ. ಒತ್ತಡದಿಂದ ತುಂಬಿದ ಜೀವನ. ನಮಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಅನೇಕ ಅಪಾಯಗಳಿಗೆ ನಾವು ಮುಖಾಮುಖಿಯಾಗುತ್ತಿದ್ದೇವೆ. ಇದರಲ್ಲಿ ನಮ್ಮ ಜೀವನ, ಆರೋಗ್ಯ, ಆಸ್ತಿ ಎಲ್ಲವೂ ತಳಕು ಹಾಕಿಕೊಂಡಿದೆ ಎಂಬುದರಲ್ಲಿ ಅನುಮಾನವಿಲ್ಲ. ಬದುಕಿನಲ್ಲಿ ನಮ್ಮ ಸಂಪತ್ತಿನ ನಿರ್ವಹಣೆಯ ಪಯಣದಲ್ಲಿ ಈ ರಿಸ್ಕ್‌ಗಳನ್ನು ನಿಭಾಯಿಸುವುದು ಅತ್ಯಂತ ಅಗತ್ಯ. ಇಂತಹ ಅಪಾಯಗಳನ್ನು ಅನೇಕ ವಿಧಗಳಲ್ಲಿ ತಗ್ಗಿಸಬಹುದು. ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದರಿಂದ, ರಿಸ್ಕ್‌ಗಳು ಬಾರದಂತೆ ತಡೆಯುವುದರಿಂದ ಅಥವಾ ಈ ರಿಸ್ಕ್‌ಗಳನ್ನು ಬೇರೆ ಕಡೆ ವರ್ಗಾಯಿಸುವುದರಿಂದ ಇದನ್ನು ತಪ್ಪಿಸಲು ಸಾಧ್ಯವಿದೆ. ಇಂತಹ ಅಪಾಯಗಳನ್ನು ವರ್ಗಾವಣೆ ಮಾಡಲು ಇರುವ ಒಂದು ಏಕೈಕ ದಾರಿ ಎಂದರೆ ನಮ್ಮ ಹಣಕಾಸು ಅಪಾಯಗಳನ್ನು ವಿಮಾ ಸಂಸ್ಥೆಗಳಿಗೆ ವರ್ಗಾಯಿಸುವುದು.

ಭಾರತದಲ್ಲಿ ಅನೇಕ ರೀತಿಯ ವಿಮಾ ಪಾಲಿಸಿಗಳಿವೆ. ಇವುಗಳಲ್ಲಿ ನಿಜಕ್ಕೂ ಯಾವುದು ಉತ್ತಮ ಮತ್ತು ಯಾವುದು ಅತ್ಯಗತ್ಯ ಎಂಬುದನ್ನು ತಿಳಿದುಕೊಳ್ಳುವುದು ಕಷ್ಟದ ಕೆಲಸ. ಹಣಕಾಸು ಸುರಕ್ಷತೆಯ ಪ್ರಮುಖ ಸಾಧನವಾಗಿ ವ್ಯಕ್ತಿಗಳು ಮತ್ತು ಉದ್ಯಮಗಳು ಹಣಕಾಸು ಸಂಕಷ್ಟಗಳಿಂದ ತಮ್ಮನ್ನು ಪಾರು ಮಾಡಿಕೊಳ್ಳಲು ಸೂಕ್ತವಾದ ವಿಮಾ ಪಾಲಿಸಿಗಳನ್ನು ಆಯ್ಕೆ ಮಾಡಿಕೊಳ್ಳುವುದು ಅತ್ಯಗತ್ಯ. ನಾವು ಎದುರಿಸುವ ನಾನಾ ಅಪಾಯಗಳು ಮತ್ತು ಸೂಕ್ತವಾದ ವಿಮಾ ಪಾಲಿಸಿಗಳನ್ನು ಆಯ್ಕೆ ಮಾಡಿಕೊಳ್ಳುವ ಮೂಲಕ ನಮ್ಮನ್ನು ನಾವು ರಕ್ಷಿಸಿಕೊಳ್ಳುವುದು ಹೇಗೆ ಮತ್ತು ಅವುಗಳಲ್ಲಿ ಇರುವ ಪ್ರಯೋಜನಗಳು ಏನು ಎಂಬುದನ್ನು ಈ ಲೇಖನದ ಮೂಲಕ ಅರ್ಥಮಾಡಿಕೊಳ್ಳಲು ಪ್ರಯತ್ನ ಮಾಡೋಣ.

## ನಾಲ್ಕು ಪ್ರಮುಖ ಅಪಾಯಗಳು

ವೈಯಕ್ತಿಕ ಮಟ್ಟದಲ್ಲಿ ಎದುರಾಗುವ ನಾಲ್ಕು ಪ್ರಮುಖ ಅಪಾಯಗಳಿಂದ ನಮ್ಮನ್ನು ರಕ್ಷಿಸಿಕೊಳ್ಳಲು ವಿಮೆ ನಮಗೆ ಸಹಾಯ ಮಾಡುತ್ತದೆ. ಅವುಗಳೆಂದರೆ; ಸಾವು, ರೋಗ, ಅಂಗವಿಕಲತೆ ಮತ್ತು ಅನೇಕ ವಿಧಗಳಲ್ಲಿ ಎದುರಾಗುವ ನಷ್ಟ.

**ಸಾವು:** ಜೀವ ವಿಮೆ ಎನ್ನುವುದು ಪ್ರತಿಯೊಬ್ಬರಿಗೂ ಅತ್ಯಗತ್ಯವಾಗಿ ಬೇಕಾದ ವಿಮಾ ಪಾಲಿಸಿ. ಅದು ವಯಸ್ಸು ಹಾಗೂ ಆದಾಯವನ್ನು ಮೀರಿದ್ದು. ಒಂದು ವೇಳೆ ಪಾಲಿಸಿದಾರರು ಮೃತಪಟ್ಟರೆ ಅವರ ಹತ್ತಿರದ ಸಂಬಂಧಿಗೆ ಅಥವಾ ಫಲಾನುಭವಿಗೆ ಇದರಿಂದ ಹಣಕಾಸು ಬೆಂಬಲ ದೊರೆಯುತ್ತದೆ. ಇದರಿಂದ ಅವರು ತೊರೆದು ಹೋದ ಕುಟುಂಬಕ್ಕೆ ಸುಸ್ಥಿರತೆಯನ್ನು ಒದಗಿಸಲು, ಅವರ ಬಾಕಿ ಸಾಲಗಳನ್ನು ತೀರಿಸಲು ಸಹಾಯ ಮಾಡುತ್ತದೆ. ಕುಟುಂಬವು ಗೌರವಪೂರ್ಣ ಜೀವನವನ್ನು ನಡೆಸಲು ನೆರವಾಗುತ್ತದೆ.

ಸಾವಿನ ರಿಸ್ಕ್ ಕವರ್ ಮಾಡುವಂತಹ ಅತ್ಯುತ್ತಮ ವಿಮೆ ಎಂದರೆ ಟರ್ಮ್ ವಿಮಾ ಪಾಲಿಸಿಗಳು. ಆದರೆ ಅಪಘಾತಗಳಿಂದ ಸಂಭವಿಸುವ ಸಾವಿಗೆ ವೈಯಕ್ತಿಕ ಅಪಘಾತ ಪಾಲಿಸಿ ಅಡಿಯಲ್ಲಿ ಉತ್ತಮ ಸೌಲಭ್ಯವನ್ನು ಪಡೆಯಬಹುದು. ಸುರಕ್ಷತೆ ಮತ್ತು ಹೂಡಿಕೆಯನ್ನು ಒಳಗೊಂಡ ಸಾಂಪ್ರದಾಯಿಕ ಜೀವ ವಿಮಾ ಯೋಜನೆಗಳು ನಾವು ಅಪೇಕ್ಷಿಸುವಂತಹ ಗರಿಷ್ಠ ರಕ್ಷಣೆ ಒದಗಿಸದೇ ಇರಬಹುದು.

**ರೋಗ:** ಆರೋಗ್ಯ ವಿಮಾ ಪಾಲಿಸಿಯು ಆಸ್ಪತ್ರೆಗೆ ದಾಖಲಾಗುವುದು ಸೇರಿದಂತೆ ವೈದ್ಯಕೀಯ ಸೌಲಭ್ಯದ ವೆಚ್ಚವನ್ನು ಭರಿಸಲು ಸಹಾಯ ಮಾಡಲಿದೆ. ಇದರಲ್ಲಿ ಅನೇಕ ರೀತಿಯ ಸರ್ಜರಿಗಳು, ವೈದ್ಯರ ತಪಾಸಣೆ, ಔಷಧಿ ಇತ್ಯಾದಿ ಸೌಲಭ್ಯಗಳನ್ನು ಪಡೆದುಕೊಳ್ಳಬಹುದು. ಗಂಭೀರ ಅಸ್ವಸ್ಥತೆ ಅಥವಾ ಗಾಯಗೊಂಡ ಸಂದರ್ಭದಲ್ಲಿ ಉಂಟಾಗುವ ಹಣಕಾಸು ಸಮಸ್ಯೆಗಳನ್ನು ನಿಭಾಯಿಸಲು ಸಾಧ್ಯವಾಗುತ್ತದೆ. ಸೂಕ್ತವಾದ ಆರೋಗ್ಯ ವಿಮೆಯನ್ನು ಆಯ್ಕೆ ಮಾಡಿಕೊಂಡರೆ ನಿಮ್ಮ ವೈಯಕ್ತಿಕ ಹಣಕಾಸು ಸೀಮಿತವಾಗಿದ್ದರೂ ಕೂಡ ಗುಣಮಟ್ಟದ ವೈದ್ಯಕೀಯ ಸೌಲಭ್ಯಗಳನ್ನು ಪಡೆಯಲು ಅನುಕೂಲವಾಗುತ್ತದೆ.

ಭಾರತದಲ್ಲಿ ಎರಡು ಮುಖ್ಯ ಆರೋಗ್ಯ ವಿಮಾ ಯೋಜನೆಗಳಿವೆ; ವೈಯಕ್ತಿಕ ಆರೋಗ್ಯ ವಿಮಾ ಯೋಜನೆಗಳು ಮತ್ತು ಕುಟುಂಬ ಆರೋಗ್ಯ ವಿಮಾ ಯೋಜನೆಗಳು. ವೈಯಕ್ತಿಕ ಆರೋಗ್ಯ ವಿಮೆ ಕೇವಲ ಒಬ್ಬ ವ್ಯಕ್ತಿಗೆ ಸೌಲಭ್ಯವನ್ನು ಒದಗಿಸಿದರೆ ಕುಟುಂಬ ಆರೋಗ್ಯ ವಿಮೆ ಯೋಜನೆ ಇಡೀ ಕುಟುಂಬದ ಆರೋಗ್ಯದ ರಕ್ಷಣೆಗೆ ಸಹಾಯವಾಗುತ್ತದೆ. ಗಂಭೀರ ಅನಾರೋಗ್ಯಕ್ಕೆ ಸಂಬಂಧಿಸಿದ ಯೋಜನೆಗಳು ನಮ್ಮ ಜೀವನ ಕ್ರಮಗಳಿಂದ ಉಂಟಾಗುವ ಸಾಮಾನ್ಯ ರೋಗಗಳಿಂದ ರಕ್ಷಣೆ ಒದಗಿಸುತ್ತದೆ. ಮೂಲ ಆರೋಗ್ಯ ವಿಮಾ ಪಾಲಿಸಿಗಳಿಗೆ ಟಾಪ್-ಅಪ್ ಮತ್ತು ಸೂಪರ್ ಟಾಪ್-ಅಪ್ ಆರೋಗ್ಯ ಯೋಜನೆಗಳ ಮೂಲಕ ಪ್ರಯೋಜನವನ್ನು ಪಡೆದುಕೊಳ್ಳಬಹುದು.

**ಅಂಗವಿಕಲತೆ:** ಮನುಷ್ಯ ಶಾಶ್ವತ ಅಥವಾ ತಾತ್ಕಾಲಿಕ ಅಂಗವಿಕಲತೆಗೆ ಒಳಗಾಗಬಹುದು. ಅಂಗವಿಕಲತೆ ವೈಯಕ್ತಿಕ ನಿಗಾ, ಸಾಮಾನ್ಯ ಜೀವನವನ್ನು ನಡೆಸುವ ಸಾಮರ್ಥ್ಯ ಹಾಗೂ ಗಳಿಕೆ ಸಾಮರ್ಥ್ಯ ಸೇರಿದಂತೆ ಅನೇಕ ಸವಾಲುಗಳನ್ನು ಒಡ್ಡಬಹುದು. ಇಂತಹ ರಿಸ್ಕ್‌ಗಳಿಗೆ ರಕ್ಷಣೆ ನೀಡುವಂತಹ ಯೋಜನೆಗಳನ್ನು ಪಡೆದುಕೊಳ್ಳುವುದು ಅತ್ಯಂತ ನಿರ್ಣಾಯಕ. ಅದರಲ್ಲೂ ಮುಖ್ಯವಾಗಿ ಕುಟುಂಬದ ದುಡಿಯುವ ಸದಸ್ಯ ಅಂಕವಿಕಲ ಸಮಸ್ಯೆ ಒಳಗಾದಾಗ ಇಂತಹ ಪಾಲಿಸಿಗಳು ಮುಖ್ಯ. ಅಂಕವಿಕಲತೆಯಂತಹ ರಿಸ್ಕ್‌ನ್ನು ನಮ್ಮಲ್ಲಿ ಅನೇಕರು ನಿರ್ಲಕ್ಷ ಮಾಡುತ್ತಾರೆ. ಅದರಿಂದ ದೊಡ್ಡ ನಷ್ಟವೇ ಉಂಟಾಗಬಹುದು ಅಥವಾ ದುಬಾರಿಯಾಗಿ ಪರಿಣಮಿಸಬಹುದು.

ವೈಯಕ್ತಿಕ ಅಪಘಾತ ಪಾಲಿಸಿಗಳು ಅಪಘಾತದಿಂದ ಉಂಟಾಗಬಹುದಾದ

ಅಂಗವಿಕಲತೆಗೆ ಉತ್ತಮ ಸೌಲಭ್ಯವನ್ನು ಒದಗಿಸುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಈ ಪಾಲಿಸಿಗಳು ಕೈಗೆಟಕುವಂತಿದ್ದು ಖರೀದಿ ಮಾಡುವುದು ಸುಲಭ. ಇದರ ಜೊತೆಗೆ ಕೆಲವು ಆರೋಗ್ಯ ಮತ್ತು ವೈಯಕ್ತಿಕ ಅಪಘಾತ ಪಾಲಿಸಿಗಳು ಆಸ್ಪತ್ರೆಗೆ ದಾಖಲಾದ ಅವಧಿಯಲ್ಲಿ ಅಥವಾ ಅಂಗವಿಕಲತೆಯಿಂದ ಉಂಟಾದ ಆದಾಯದ ನಷ್ಟವನ್ನು ಭರಿಸುವ ಕೆಲಸವನ್ನು ಕೂಡ ಮಾಡುತ್ತವೆ. ವೈಯಕ್ತಿಕ ಅಪಘಾತ ಪಾಲಿಸಿಗಳು ಅಪಘಾತದಿಂದ ಉಂಟಾಗುವ ಸಾವಿಗೆ ಪರಿಹಾರವನ್ನೂ ಒದಗಿಸುತ್ತವೆ. ಇವು ಕೈಗೆಟಕುವಂತಿದ್ದು ಪ್ರತಿಯೊಬ್ಬರೂ ತಮ್ಮ ವಿಮಾ ಪೋರ್ಟ್‌ಫೋಲಿಯೋದಲ್ಲಿ ಸೇರಿಸಿಕೊಳ್ಳಬೇಕು.

**ಹಾನಿಗಳು:** ಯಾವುದೇ ಸಂದರ್ಭದಲ್ಲಿ ಮತ್ತು ಯಾವುದೇ ಕಾರಣಕ್ಕೆ ಯಾವುದೇ ಆಸ್ತಿ–ಸೊತ್ತಿಗೆ ಹಾನಿ ಅಥವಾ ನಷ್ಟ ಉಂಟಾಗಬಹುದು. ಅದರಿಂದ ನಿಮ್ಮ ಕಾರು, ಮನೆ, ಅಮೂಲ್ಯವಾದ ವಸ್ತುಗಳಿಗೆ, ಅಂಗಡಿ, ಫ್ಯಾಕ್ಟರಿ ಮುಂತಾದವುಗಳಿಗೆ ಅಪಾಯ ಉಂಟಾಗಬಹುದಾಗಿದೆ. ಹೀಗೆ ಉಂಟಾಗಬಹುದಾದ ಹಾನಿಯನ್ನು ಕವರ್ ಮಾಡಲು ಸೂಕ್ತವಾದ ರಕ್ಷಣೆ ಬೇಕಾಗುತ್ತದೆ. ಒಂದು ಸಂತೋಷದ ಸಂಗತಿ ಎಂದರೆ ಭಾರತದಲ್ಲಿ ಎಲ್ಲ ವಾಹನಗಳು ಕನಿಷ್ಠ ಥರ್ಡ್ ಪಾರ್ಟಿ ಮೋಟಾರ್ ವಿಮೆ ಮಾಡುವುದು ಕಡ್ಡಾಯವಾಗಿದೆ. ಈ ವಿಮೆಯಿಂದಾಗಿ ಅಪಘಾತದಿಂದ ಆಸ್ತಿ ಮತ್ತು ವ್ಯಕ್ತಿಗೆ ಉಂಟಾದ ಹಾನಿಯನ್ನು ಭರಿಸಿಕೊಳ್ಳಲು ಪಾಲಿಸಿದಾರರಿಗೆ ಸಹಕಾರಿಯಾಗಿದೆ. ಹಾಗಾಗಿ ಸಮಗ್ರ ಮೋಟಾರ್ ವಿಮಾ ಪಾಲಿಸಿ ಖರೀದಿ ಮಾಡುವುದು ಅತ್ಯಗತ್ಯ ಎಂದು ಸಲಹೆ ಮಾಡಬಹುದಾಗಿದೆ. ಇದರ ಜೊತೆಗೆ ಗೃಹ ವಿಮಾ ಪಾಲಿಸಿ ಕೂಡ ಕಟ್ಟಡಕ್ಕೆ ಸಂಭವಿಸಿದ ಹಾನಿಯನ್ನು ಭರಿಸುತ್ತದೆ. ವಾಹನ ಮತ್ತು ಗೃಹ ವಿಮಾ ಸೌಲಭ್ಯ ಮಾತ್ರವಲ್ಲದೆ ಉದ್ಯಮಿಗಳು ಹಾಗೂ ವೃತ್ತಿಪರರನ್ನು ರಕ್ಷಿಸುವ ಇನ್ನೂ ಅನೇಕ ಪಾಲಿಸಿಗಳಿದ್ದು ಅವುಗಳನ್ನು ತಮ್ಮ ಅಗತ್ಯಕ್ಕೆ ಅನುಗುಣವಾಗಿ ಆಯ್ಕೆ ಮಾಡಿಕೊಳ್ಳಬಹುದು. ಇದು ಅಂಗಡಿ ಮುಂಗಟ್ಟುಗಳು, ಫ್ಯಾಕ್ಟರಿಗಳು, ಕಚೇರಿ ಸೇರಿದಂತೆ ಅನೇಕ ಸೌಕರ್ಯಗಳಿಗೆ ಉಂಟಾಗುವ ಹಾನಿಯಿಂದ ಭದ್ರತೆ ಒದಗಿಸುತ್ತದೆ.

ಈ ಹೊತ್ತಿಗೆ ಪ್ರತಿಯೊಬ್ಬರೂ ವಿಮಾ ಪಾಲಿಸಿಗಳ ಅನೇಕ ಪ್ರಯೋಜನಗಳನ್ನು ಪರಿಚಯ ಮಾಡಿಕೊಂಡಿರುತ್ತಾರೆ. ಅಷ್ಟಿದ್ದರೂ ಕೂಡ ಮೂರು ಬಹುಮುಖ್ಯ ಪ್ರಯೋಜನಗಳನ್ನು ಇಲ್ಲಿ ಪ್ರಸ್ತಾಪಿಸಬಹುದಾಗಿದೆ:

**ಹಣಕಾಸು ಭದ್ರತೆ:** ನಿಮ್ಮ ಜೀವನದಲ್ಲಿ ಎದುರಾಗುವ ಅನಿರೀಕ್ಷಿತ ವೆಚ್ಚಗಳು ಹಾಗೂ ತುರ್ತು ಅಗತ್ಯಗಳನ್ನು ಭರಿಸಿಕೊಡುವಲ್ಲಿ ವಿಮೆ ಸಹಾಯ ಮಾಡುತ್ತದೆ. ಇಂತಹ ಪಾಲಿಸಿಗಳು ನೀವು ಅನಗತ್ಯವಾಗಿ ಸಾಲ ಮಾಡುವುದನ್ನು ತಪ್ಪಿಸುತ್ತದೆ ಅಥವಾ ಈ ವೆಚ್ಚಗಳನ್ನು ಭರಿಸಲು ಆಸ್ತಿಗಳನ್ನು ಮಾರಾಟ ಮಾಡುವ ಅಪಾಯವನ್ನು ತಪ್ಪಿಸುತ್ತದೆ. ಸಣ್ಣ ಪುಟ್ಟ ಖರ್ಚುಗಳಿಗೆ ವಿಮೆ ಛತ್ರಿಯ ರೂಪದಲ್ಲಿ ಕೆಲಸ ಮಾಡುತ್ತದೆ.

**ಅನುಕ್ರಮತೆ:** ಹಣಕಾಸಿನ ಆಘಾತವನ್ನು ಸಮರ್ಥವಾಗಿ ಎದುರಿಸಲು ವಿಮೆ ಸಹಾಯ ಮಾಡುತ್ತದೆ. ಹಾಗಾಗಿ ಸೂಕ್ತ ಪ್ರಮಾಣದಲ್ಲಿ ವಿಮೆಯನ್ನು ಹೊಂದಿದ್ದರೆ ಜೀವನದಲ್ಲಿ ಹಣಕಾಸಿನ ಒತ್ತಡ ಮತ್ತು ಸಮಸ್ಯೆಗಳಿಂದ ಪಾರಾಗಲು ಸಾಧ್ಯವಾಗುತ್ತದೆ. ಜೊತೆಗೆ ಘಟನೆ ಸಂಭವಿಸಿದ ಬಳಿಕವೂ ಜೀವನವನ್ನು ಯಾವುದೆ ತೊಂದರೆ ಇಲ್ಲದೆ ಮುಂದುವರಿಸಲು ಸಹಾಯವಾಗುತ್ತದೆ.

**ಮಾನಸಿಕ ನೆಮ್ಮದಿ:** ಸಂಭವಿಸಬಹುದಾದ ಘಟನೆಯಿಂದ ಹಣಕಾಸು ರಕ್ಷಣೆ ಸಿಗುತ್ತದೆ ಎಂಬ ಕಾರಣದಿಂದ ವಿಮೆ ನಿಮಗೆ ಮಾನಸಿಕ ನೆಮ್ಮದಿಯನ್ನು ನೀಡುತ್ತದೆ. ಇದರಿಂದ ನೀವು ನಿಮ್ಮ ಕುಟುಂಬ, ನಿಮ್ಮ ವ್ಯಾಪಾರ ಅಥವಾ ನಿಮ್ಮ ಹವ್ಯಾಸಗಳನ್ನು ಮುಂದುವರಿಸಲು ಅವಕಾಶ ಒದಗಿಸುತ್ತದೆ. ಇದು ಯಾವುದೇ ರೀತಿಯ ವೈದ್ಯಕೀಯ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ ವಿಶ್ವಾಸವನ್ನು ನೀಡುತ್ತದೆ. ವಿಮೆ ಇಲ್ಲದೇ ಹೋದರೆ ಸಾಧ್ಯವಾಗುವುದಿಲ್ಲ.

**ತೆರಿಗೆ ಪ್ರಯೋಜನ:** ಕೆಲವು ಪ್ರಕರಣಗಳಲ್ಲಿ ವಿಮೆಗೆ ಪಾವತಿ ಮಾಡಿದ ಪ್ರೀಮಿಯಂ ತೆರಿಗೆ ವ್ಯಾಪ್ತಿಯಡಿ ಬರುತ್ತದೆ. ಇದು ನಿಮ್ಮ ಒಟ್ಟಾರೆ ತೆರಿಗೆ ಹೊರೆಯನ್ನು ತಗ್ಗಿಸಲು ಸಹಾಯ ಮಾಡುತ್ತದೆ. ಹಾಗಂತ ವಿಮೆ ಖರೀದಿಗೆ ತೆರಿಗೆ ಉಳಿತಾಯ ಒಂದನ್ನೇ ಪ್ರಮುಖ ಅಂಶವಾಗಿ ಪರಿಗಣಿಸಬಾರದು. ಇದನ್ನು ಯಾವತ್ತೂ ಉಪ–ಉತ್ಪನ್ನವಾಗಿ ಪರಿಗಣಿಸಬೇಕು.

**ವಿಮೆ ಖರೀದಿ:** ನಾವು ಜೀವನದಲ್ಲಿ ಯಾವೆಲ್ಲ ರೀತಿಯ ಅಪಾಯಗಳಿಗೆ ಮುಖಾಮುಖಿಯಾಗುತ್ತೇವೆ ಮತ್ತು ಇದರ ವಿರುದ್ಧ ನಮ್ಮನ್ನು ನಾವು ರಕ್ಷಿಸಿಕೊಳ್ಳಲು ವಿಮೆಯಲ್ಲಿ ಇರುವ ಆಯ್ಕೆಗಳೇನು ಎಂಬುದನ್ನು ಈ ಲೇಖನದ ಮೂಲಕ ತಿಳಿಸುವ ಪ್ರಯತ್ನ ಮಾಡಲಾಗಿದೆ. ಸೂಕ್ತ ವಿಮಾ ಯೋಜನೆಯನ್ನು ಆಯ್ಕೆ ಮಾಡಿಕೊಳ್ಳುವುದಕ್ಕೂ ಮುನ್ನ ನಿಮ್ಮ ಅಗತ್ಯಗಳೇನು ಮತ್ತು ಅದಕ್ಕೆ ಯಾವ ರೀತಿಯ ವಿಮಾ ಪಾಲಿಸಿಗಳು ಬೇಕು ಹಾಗೂ ಎಷ್ಟು ಮೊತ್ತದ ಸೌಲಭ್ಯಗಳು ಅಗತ್ಯವಿವೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಅದಾದ ಬಳಿಕ ಯಾವುದೇ ವಿಮೆಯನ್ನು ಖರೀದಿ ಮಾಡುವುದಕ್ಕೂ ಮುನ್ನ ನಾನಾನ ವಿಮಾ ಕಂಪನಿಗಳ ಪಾಲಿಸಿಗಳನ್ನು ತುಲನೆ ಮಾಡಿ. ಒಪ್ಪಂದಕ್ಕೆ ಸಹಿ ಹಾಕುವುದಕ್ಕೂ ಮುನ್ನ ಪಾಲಿಸಿಯ ನಿಯಮಗಳು ಮತ್ತು ಷರತ್ತುಗಳನ್ನು ಚೆನ್ನಾಗಿ ಓದಿ ಅರ್ಥ ಮಾಡಿಕೊಳ್ಳಬೇಕು. ಕೆಲವು ವರ್ಷಗಳ ಮಟ್ಟಿಗಾದರೂ ನಿಮ್ಮ ವಿಮಾ ಪೋರ್ಟ್‌ಫೋಲಿಯೋ ಮೌಲ್ಯಮಾಪನ ಮಾಡಬೇಕು ಮತ್ತು ಕಾಲಕ್ಕೆ ತಕ್ಕಂತೆ ಅದರ ಸೌಲಭ್ಯಗಳನ್ನು ಮೇಲ್ದರ್ಜೆಗೆ ಏರಿಸಬೇಕು ಎಂದು ನಾವು ಶಿಫಾರಸು ಮಾಡುತ್ತೇವೆ. ನಿಮ್ಮ ವಿಮಾ ಅಗತ್ಯಗಳನ್ನು ಅರ್ಥ ಮಾಡಿಕೊಳ್ಳಲು ಮತ್ತು ಸೂಕ್ತ ಉತ್ಪನ್ನವನ್ನು ಆಯ್ಕೆ ಮಾಡಿಕೊಳ್ಳಲು ನಂಬಿಕಸ್ಥ ವಿಮಾ ಸಲಹೆಗಾರರು ಸಹಾಯ ಮಾಡಬಲ್ಲರು. ನಿಮ್ಮ ಸಂಪತ್ತನ್ನು ರಕ್ಷಣೆ ಮಾಡುವಂತಹ ಈ ನಿರ್ಣಾಯಕ ಅಂಶವನ್ನು ನಿರ್ಲಕ್ಷ ಮಾಡುವುದು ತರವಲ್ಲ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.


## ಇನ್‌ಸ್ಪೈರ್ ಇಂಡಿಯಾ ವೆಲ್ತ್ ಪ್ರೈವೇಟ್ ಲಿ.

(ARN–79020)

ಎಎಂಎಫ್‌ಐ ನೋಂದಾಯಿತ ಮ್ಯೂಚುಯಲ್ ಫಂಡ್ ವಿತರಕರು

ನಮ್ಮ ಸಂಪರ್ಕ: 9148319207, 080–42129917

Mail: info@inspireindiafs.com

**ನಮ್ಮ ಸೇವೆಗಳು**

1. ಮ್ಯೂಚುಯಲ್ ಫಂಡ್ಸ್
2. ಸ್ಟಾಕ್ ಬ್ರೋಕಿಂಗ್
3. ಫೈನಾನ್ಷಿಯಲ್ ಕನ್ಸಲ್ಟಿಂಗ್ & ಪ್ಲಾನಿಂಗ್
4. ಪ್ರಾಪರ್ಟಿ ಇನ್ವೆಸ್ಟ್‌ಮೆಂಟ್
5. ತೆರಿಗೆ ಉಳಿತಾಯ ಬಾಂಡ್‌ಗಳು
6. ವಿಮೆ
7. ವೆಲ್ತ್ ಮ್ಯಾನೇಜ್‌ಮೆಂಟ್
8. ಹಣಕಾಸು ಮೌಲ್ಯಮಾಪನ
9. ತೆರಿಗೆ ಸಲ್ಲಿಕೆ
10. ವಿಲ್ ಬರವಣಿಗೆ

ವಿಳಾಸ : INSPIRE INDIA WEALTH PVT LTD

@ 65, 'Surasa Enclave', 1st Floor, Puttanna Road,
Gandhi Bazar, Basavanagudi, Bengaluru-560004



**ಹಕ್ಕುತ್ಯಾಗ**

ಈ ವಾರ್ತಾಪತ್ರದ ಸಂಕಲನ ಮಾಡುವ ಸಂದರ್ಭದಲ್ಲಿ ನಾವು ಎಲ್ಲ ರೀತಿಯ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸಿರುತ್ತೇವೆ. ಇಲ್ಲಿನ ಮಾಹಿತಿಗಳನ್ನು ಹಲವು ನಂಬಿಕೆಗೆ ಅರ್ಹವಾದ ಮೂಲಗಳಿಂದ ಪಡೆದಿರುತ್ತೇವೆ. ಆದರೆ, ಯಾವುದೇ ಮಾಹಿತಿಯ ಖಚಿತತೆ, ಅರ್ಹತೆ ಅಥವಾ ಪರಿಪೂರ್ಣತೆಯ ಬಗ್ಗೆ ಖಾತರಿಯನ್ನು ನೀಡುವುದಿಲ್ಲ. ಹಾಗಾಗಿ ಇಂತಹ ಮಾಹಿತಿ ಬಳಕೆಯಿಂದ ಆಗಬಹುದಾದ ಯಾವುದೇ ದೋಷ ಅಥವಾ ಲೋಪಗಳಿಗೆ ಜವಾಬ್ದಾರರಾಗಿರುವುದಿಲ್ಲ. ಈ ವಾರ್ತಾಪತ್ರದಲ್ಲಿ ತಿಳಿಸಲಾದ, ಚರ್ಚಿಸಲಾದ ಅಥವಾ ಶಿಫಾರಸ್ಸು ಮಾಡಲಾದ ಯಾವುದೇ ಯೋಜನೆಗಳಿಗೆ ಸಂಬಂಧಿಸಿದಂತೆ ಹೂಡಿಕೆಯನ್ನು ಮಾಡುವ ಸಮರ್ಪಕತೆಯ ಬಗ್ಗೆ ಹೂಡಿಕೆದಾರರು ಸೂಕ್ತವಾದ ಹಣಕಾಸು ಸಲಹೆಗಳನ್ನು ಪಡೆಯಬೇಕು ಮತ್ತು ಭವಿಷ್ಯದ ನಿರೀಕ್ಷೆಗಳ ಬಗ್ಗೆ ನೀಡಿರುವ ಹೇಳಿಕೆಗಳು ಕಾರ್ಯರೂಪಕ್ಕೆ ಬರಬಹುದು ಅಥವಾ ಬಾರದೇ ಇರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮ್ಯೂಚುಯಲ್ ಫಂಡ್ ಹೂಡಿಕೆಗಳು ಯಾವತ್ತೂ ಮಾರುಕಟ್ಟೆಗೆ ಸಂಬಂಧಿಸಿದ ಅಪಾಯದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಹಾಗಾಗಿ ಹೂಡಿಕೆಯನ್ನು ಮಾಡುವುದಕ್ಕೂ ಮುನ್ನ ನಿಮಗೆ ನೀಡಲಾದ ದಾಖಲೆಗಳನ್ನು ದಯವಿಟ್ಟು ಅತ್ಯಂತ ಎಚ್ಚರಿಕೆಯಿಂದ ಓದಿಕೊಳ್ಳಿ. ಹಿಂದಿನ ನಿರ್ವಹಣೆಯ ಕೇವಲ ಸೂಚಕ ಉದ್ದೇಶವನ್ನು ಹೊಂದಿದ್ದು ಅದು ಯಾವುದೇ ಕಾರಣಕ್ಕೂ ಭವಿಷ್ಯದ ಮಾರ್ಗದರ್ಶಕವಾಗಿರುವುದಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.


'ಷೇರು ಮಾರುಕಟ್ಟೆಯಲ್ಲಿ ಎಂಥವರು ತುಂಬಿದ್ದಾರೆಂದರೆ ಅವರಿಗೆ ಪ್ರತಿಯೊಂದರ ಬೆಲೆಯೂ ಗೊತ್ತಿದೆ.
ಆದರೆ ಯಾವುದರ ಮೌಲ್ಯವೂ ಗೊತ್ತಿಲ್ಲ.'